ಎನ್.ವೈ.ಸಾಗರ
**ಸರ್ಕಾರದ ಉಪ ಕಾರ್ಯದರ್ಶಿ**
**(ಆಡಳಿತ-2)**
ಗ್ರಾಮೀಣ ಅಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ದೂರವಾಣಿ : 22341825
22032534
ನಿವಾಸ : 23482050
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬ್ಲಾಕ್ 'ಸಿ' ೨ನೇ ಮಹಡಿ
ಡಾ॥ ಬಿ.ಆರ್. ಅಂಬೇಡ್ಕರ್ ರಸ್ತೆ
ಬೆಂಗಳೂರು – ೫೬೦ ೦೦೧

ಅ.ಸ.ಪ. ಸಂಖ್ಯೆ: **ಗ್ರಾಅಪ 10 ಇತರೆ 2014**

ದಿನಾಂಕ: 12-03-2014.

ಮಾನ್ಯರೆ,

**ವಿಷಯ :** ಕರ್ನಾಟಕ ಮಾಹಿತಿ ಆಯೋಗಕ್ಕೆ **RTI 2005** ರ ಕಲಂ 4(1)(ಎ) 4(1)(ಬಿ) ಅನುಷ್ಠಾನದ ವಿವರಗಳನ್ನು ಮತ್ತು 2013-14ನೇ ಸಾಲಿನ ವಾರ್ಷಿಕ ವರದಿ ತಯಾರಿಕೆಗೆ ಮಾಹಿತಿ ಒದಗಿಸುವ ಬಗ್ಗೆ.

**ಉಲ್ಲೇಖ:** ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಬೆಂಗಳೂರು, ಇವರ ಅ.ಸ. ಪತ್ರ ದಿನಾಂಕ: 29-01-2014.

* * *

ಮಾಹಿತಿ ಹಕ್ಕು ಅಧಿನಿಯಮ 2005ರಡಿ ತಮ್ಮ ಜಿಲ್ಲಾ ಪಂಚಾಯತ್ ಮತ್ತು ಅದರ ವ್ಯಾಪ್ತಿಗೊಳಪಡುವ ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್ ಗಳನ್ನೊಳಗೊಂಡ ಕಲಂ 4(1)(ಎ) 4(1)(ಬಿ) ಪ್ರಕಟಿಸಿದ ಅಂಶಗಳನ್ನು ಈಗಾಗಲೇ ತಿಳಿಸಿದ ವೆಬ್ ಸೈಟ್ ನಲ್ಲಿ ಅಪಲೋಡ್ ಮಾಡಿದ ವಿವರಗಳನ್ನು ಮಾಹಿತಿ ಆಯೋಗದ ನಮೂನೆ V-A/ V-B ರಲ್ಲಿ ದಿನಾಂಕ:25-02-2014ರೊಳಗೆ ವರದಿ ಮಾಡಲು ಕೋರಿರುವ ಸರ್ಕಾರದ ಇದೇ ಸಮ ಸಂಖ್ಯೆಯ ದಿನಾಂಕ:18-02-2014ರ ಪತ್ರ ಮತ್ತು ದಿನಾಂಕ: 26-02-2014ರ ಇ-ಮೇಲ್‌ನತ್ತ ತಮ್ಮ ಗಮನ ಸೆಳೆಯಲಾಗಿದೆ.

ಈವರೆಗೂ ತಮ್ಮಿಂದ ಕೋರಿರುವ ಸದರಿ ಮಾಹಿತಿ ಸ್ವೀಕೃತವಾಗಿರುವುದಿಲ್ಲವಾದುದರಿಂದ ಕರ್ನಾಟಕ ಮಾಹಿತಿ ಆಯೋಗಕ್ಕೆ ಕ್ರೋಢೀಕೃತ ಮಾಹಿತಿ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಇದಲ್ಲದೆ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ತಮ್ಮ ದಿನಾಂಕ: 20-01-2014ರ ಅರೆ ಸರ್ಕಾರಿ ಪತ್ರದಲ್ಲಿ ಕಳೆದ ಸಾಲುಗಳಲ್ಲಿ ನೀಡಿದ ವಾರ್ಷಿಕ ವರದಿಗಳಲ್ಲಿ ನ್ಯೂನತೆಗಳಾದ್ದು ಅದು ಪುನರಾವರ್ತನೆಯಾಗದಂತೆ ಲಗತ್ತಿಸಿ ಕಳಿಹಿಸಿದ **CHECK LIST** ಪ್ರಕಾರ ದಿನಾಂಕ: 01-04-2013 ರಿಂದ 31-03-2014ರ ವರೆಗಿನ 2013-14ನೇ ಸಾಲಿನ ವಾರ್ಷಿಕ ಮಾಹಿತಿಯನ್ನು ಸರಿಯಾಗಿ ತಮ್ಮಿಂದ ಪಡೆದು ಕ್ರೋಢೀಕೃತ ವರದಿಯನ್ನು ಸಲ್ಲಿಸುವಂತೆ ಕೋರಿರುತ್ತಾರೆ.

ಆದುದರಿಂದ ತಾವು ಈ ವಿಷಯವನ್ನು ಸಹ ಅತಿ ಅದ್ಯತೆಯ ಮೇರೆಗೆ ಪರಿಗಣಿಸಿ ಅಪೇಕ್ಷಿತ ತಮ್ಮ ಜಿಲ್ಲಾ ಪಂಚಾಯತ್‌ನ ಪೂರ್ಣ (ಜಿ.ಪಂ/ ತಾ.ಪಂ/ಗ್ರಾ.ಪಂ) ಗಳ ಮಾಹಿತಿ ಸೇರಿದಂತೆ) ಮಾಹಿತಿಯನ್ನು ಮಾಹಿತಿ ಆಯೋಗದ **CHECK LIST** ನಂತೆ ನಿಶ್ಚಿತ ನಮೂನೆ **I II III ರಲ್ಲಿ** ಸಂಗ್ರಹಿಸಿ ಅದನ್ನು ನಮೂನೆ **IV ರಲ್ಲಿ** ಮತ್ತು **4(1)(ಎ)/ 4(1)(ಬಿ) ರಡಿ ಮಾಹಿತಿ** ಪ್ರಕಟಿಸಿ ಅಪ್‌ಲೋಡ್ ಮಾಡಿದ ವಿವರಗಳನ್ನು ನಮೂನೆ **V-A/V-B** ನಲ್ಲಿ ಸರಿಯಾಗಿ ಕ್ರೋಢೀಕರಿಸಿ ದಿನಾಂಕ:15-04-2014ರೊಳಗೆ ಈ ಸಚಿವಾಲಯಕ್ಕೆ ತಪ್ಪದೇ ಕಳುಹಿಸಿಕೊಡಲು ಮತ್ತೊಮ್ಮೆ ಕೋರಬಯಸುತ್ತೇನೆ.

**ಗೌರವಗಳೊಂದಿಗೆ,**

ತಮ್ಮ ವಿಶ್ವಾಸಿ,

**ಶ್ರೀ ಪ್ರಕಾಶ್, ಐ.ಎಫ್.ಎಸ್.,**
**ವ್ಯವಸ್ಥಾಪಕ ನಿರ್ದೇಶಕರು,**
**ಕೆ.ಆರ್.ಐ.ಡಿ.ಎಲ್.,**
**ಬೆಂಗಳೂರು.**